**2023-24 ನೇ ಸಾಲಿನ CHD ಯೋಜನೆಯಡಿ ತೆಂಗು, ತಾಳೆ ಬೆಳೆ ಹಾಗೂ ಅಡಿಕೆಯಲ್ಲಿ ಕೋಕೋ ಮತ್ತು ಕಾಳುಮೆಣಸು ಹೊಸ ಪ್ರದೇಶ ವಿಸ್ತರಣೆ, ತೆಂಗಿನ ಸಸಿಗಳ ವಿತರಣೆ ಕಾರ್ಯಕ್ರಮ ಹಾಗೂ 2022-23ನೇ ಸಾಲಿನಲ್ಲಿ ಪ್ರದೇಶ ವಿಸ್ತರಿತ ಗೇರು, ಕಾಳುಮೆಣಸು ಮತ್ತು ಕೋಕೋ ತೋಟಗಳ ನಿರ್ವಹಣೆ ಉಪ- ಯೋಜನೆಯಡಿ ಅನುಷ್ಠಾನದ ಹೆಚ್ಚುವರಿ ಮಾರ್ಗಸೂಚಿ**

**1.ಘಟಕ ಹೆಸರು: ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮ**

**2.ಲೆಕ್ಕ ಶೀರ್ಷಿಕೆ: 2401-00-111-0-08**

**3.ಅನುದಾನ: 2023-24 ನೇ ಸಾಲಿನ CHD ಯೋಜನೆಯಡಿ ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.400.00** ಲಕ್ಷ (106- 175.00 ಲಕ್ಷ, 422- 125.00 ಲಕ್ಷ ಮತ್ತು 423-100.00 ಲಕ್ಷ).

**4. ಸಂಕ್ಷಿಪ್ತ ಪರಿಚಯ :**

ಕಲ್ಪವೃಕ್ಷ ಎಂದು ಕರೆಯಲ್ಪಡುವ ತೆಂಗು ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ರಾಜ್ಯದಲ್ಲಿ ಸುಮಾರು 6.04 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಬಹುಉಪಯೋಗಿ ಬೆಳೆಯಾದ ತೆಂಗು ಕೃಷಿಯಿಂದ ಉತ್ತಮ ಲಾಭ ಗಳಿಸಬಹುದು. ಆಹಾರ , ಪಾನೀಯ, ಉರುವಲು, ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳು,ಇತ್ಯಾದಿ ಹಲವಾರು ತೆಂಗು ಉತ್ಪನ್ನಗಳನ್ನು ಉಪಯೋಗಿಸಲಾಗುವುದು. ತೆಂಗಿನ ಮರದ ಎಲ್ಲಾ ಭಾಗಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬಳಸಲಾಗುವುದರಿಂದ ಅದರ ವಾಣಿಜ್ಯ ಮೌಲ್ಯ ಹೆಚ್ಚಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ರೈತರು ಅಡಿಕೆ ಬೆಳೆಗೆ ಹೆಚ್ಚಿನ ಒಲವು ತೋರುತ್ತಿದ್ದು, ತೆಂಗಿನ ಪ್ರದೇಶ ವಿಸ್ತರಣೆ ಗಮನಾರ್ಹವಾಗಿ ಇಳಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ತೆಂಗು ಬೆಳೆಯ ಪ್ರಯೋಜನದ ಮನವರಿಕೆ ಮಾಡಲು ಹಾಗೂ ತೆಂಗು ಪ್ರದೇಶ ವಿಸ್ತರಣೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಸದರಿ ಉಪಯೋಜನೆಯನ್ನು ರೂಪಿಸಲಾಗಿದೆ.

**5. ಉದ್ದೇಶಗಳು:**

- ತೆಂಗು ಬೆಳೆ ಅಭಿವೃದ್ಧಿಪಡಿಸುವ ಮೂಲಕ ತೆಂಗು ಪ್ರದೇಶ ವಿಸ್ತರಣೆಗೆ ಉತ್ತೇಜಿಸುವುದು.
- ತೆಂಗು ಬೆಳೆ ಬೆಳೆಯುವ ಮೂಲಕ ಎಳನೀರು ಮತ್ತು ಕೊಬ್ಬರಿ ಸಂಸ್ಕರಣೆಗೆ ಉತ್ತೇಜಿಸುವುದು.
- ತೆಂಗು ಪ್ರದೇಶ ವಿಸ್ತರಣೆಯ ಮೂಲಕ ರೈತರು ಆದಾಯ ಹೆಚ್ಚಿಸಿಕೊಳ್ಳುವುದು.
- ನುಸಿರೋಗ ಮತ್ತು ಕೀಟಬಾಧೆಯಿಂದ ನಾಶವಾಗಿರುವ ತೆಂಗಿನ ಗಿಡಗಳಿಗೆ ಬದಲಾಗಿ ತೆಂಗು ಪ್ರದೇಶ ವಿಸ್ತರಣೆ ಹೆಚ್ಚಿಸಿಕೊಳ್ಳುವುದು.

## 6. ಕಾರ್ಯಕ್ರಮದ ವಿವರ:

ಒಂದು ಹೆಕ್ಟೇರ್ ತೆಂಗಿನ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲು ರೂ.31,966.59ಗಳ ವೆಚ್ಚವನ್ನು ಭರಿಸಬೇಕಾಗಿರುತ್ತದೆ. ಎಲ್ಲಾ ವರ್ಗದ ರೈತರಿಗೆ ಒಂದು ಹೆಕ್ಟೇರ್ ಪ್ರದೇಶ ವಿಸ್ತರಣೆಗೆ ರೂ.9225.00ಗಳ ಸಹಾಯಧನವನ್ನು ಒದಗಿಸಲಾಗುವುದು ಹಾಗೂ ರೈತರು ರೂ.22741.59ಗಳ ವೆಚ್ಚವನ್ನು ಭರಿಸಬೇಕಾಗಿರುತ್ತದೆ. ಇಲಾಖೆಯ SR ದರಗಳನ್ವಯ ಪ್ರತಿ ತೆಂಗಿನ ಸಸಿ ನಾಟಿ ಮಾಡುವುದಕ್ಕಾಗಿ ಒಟ್ಟು ರೂ. 259.89/- ವೆಚ್ಚ ತಗಲುತ್ತದೆ. ಇಲಾಖೆಯಿಂದ ರೂ.75.00ಗಳನ್ನು ಸಹಾಯಧನವಾಗಿ ನೀಡಲಾಗುವುದು. ಉಳಿದ ರೂ.184.89ಗಳ ವೆಚ್ಚವನ್ನು ರೈತರು / ಫಲಾನುಭವಿಗಳು ತಮ್ಮ ಸ್ವಂತ ಖರ್ಚಿನಲ್ಲೇ ಭರಿಸುವುದು. ಘಟಕ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.

ಘಟಕ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.

**ಕೋಷ್ಠಕ: (9*9ಮೀ.) 123 ಸಂಖ್ಯೆ**

| ಕ್ರ. ಸಂ. | ಕಾರ್ಯಕ್ರಮವಾರು ವಿವರಗಳು | ಒಂದು ಗಿಡಕ್ಕೆ ಘಟಕ ದರ ಇಲಾಖಾ SR ಅನ್ವಯ (ರೂ.ಗಳಲ್ಲಿ) | ತಗಲುವ ಒಟ್ಟು ವೆಚ್ಚ ಪ್ರತಿ ಹೆಕ್ಟೇರ್ (ರೂ.ಗಳಲ್ಲಿ) | ಇಲಾಖೆಯಿಂದ ಭರಿಸುವ ವೆಚ್ಚ (ರೂ.ಗಳಲ್ಲಿ) | ರೈತರು ಭರಿಸಬೇಕಾದ ವೆಚ್ಚ (ರೂ.ಗಳಲ್ಲಿ) |
|---|---|---|---|---|---|
| 1 | ಗುಂಡಿ ತೆಗೆಯುವುದು (1 ಘ.ಮೀ) | 160.09 | 19691.07 | | 19691.07 |
| 2 | ಗುಣಿಯಿಂದ ತೆಗೆದ ಮಣ್ಣು, ಮರಳು ಎಲ್ಲಾ ಸಾಮಾಗ್ರಿಗಳನ್ನು ಮಿಶ್ರಣ ಮಾಡಿ ಗುಣಿಯ ಶೇ.90 ಭಾಗವನ್ನು ತುಂಬುವುದು | 17.36 | 2135.28 | | 2135.28 |
| 3 | ಗಿಡಗಳ ವೆಚ್ಚ | 75 | 9225.00 | 9225.00 | |
| 4 | ಗಿಡಗಳನ್ನು ಗುಣಿಯವರೆಗೆ ಸಾಗಿಸಿಕೊಂಡು ಗುಣಿಯ ಮಧ್ಯದಲ್ಲಿ ಗಿಡವನ್ನು ನೆಟ್ಟು ಆಧಾರ ನೀಡುವುದು | 7.441 | 915.24 | | 915.24 |
| **ಒಟ್ಟು ವೆಚ್ಚ** | | **259.89** | **31966.59** | **9225.00** | **22741.59** |

**ಷರಾ:** ಗಿಡಗಳ ವೆಚ್ಚವನ್ನು ಹೊರತುಪಡಿಸಿ ಇತರೆ ಘಟಕಗಳ ವೆಚ್ಚವನ್ನು ರೈತರೇ ಭರಿಸುವುದು. ಇದರನ್ವಯ ರೈತರು 1 ಹೆಕ್ಟೇರ್ ಗೆ ತಗಲುವ ಒಟ್ಟು ವೆಚ್ಚದಡಿ ಶೇ. 71.15 ರಷ್ಟು ವೆಚ್ಚವನ್ನು ರೈತರೇ ಭರಿಸುವುದು.

ರೈತರಿಗೆ 0.20 ಹೆಕ್ಟೇರ್‌ನಿಂದ 1.00 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲು ಇಲಾಖೆಯಿಂದ ಅಗತ್ಯವಿರುವ ತೆಂಗಿನ ಸಸಿಗಳ ವೆಚ್ಚವನ್ನು ಇಲಾಖಾ ವತಿಯಿಂದ ಭರಿಸಲಾಗುವುದು ಹಾಗೂ ಗುಂಡಿ ತೆಗೆದು ತೆಂಗಿನ ಸಸಿಯನ್ನು ನಾಟಿ ಮಾಡಲು ತಗಲುವ ಒಟ್ಟು ವೆಚ್ಚವನ್ನು ರೈತರು ಭರಿಸಬೇಕಾಗಿರುತ್ತದೆ. ಮುಂದುವರೆದು, ಸರ್ಕಾರಿ ಶಾಲೆ / ಕಾಲೇಜು / ಕಛೇರಿಗಳಿಗೆ ಆವರಣದಲ್ಲಿ ತೆಂಗಿನ ಸಸಿಯನ್ನು ನಾಟಿ ಮಾಡಲು ಸ್ಥಳ ಮತ್ತು ನೀರಿನ ಲಭ್ಯತೆ ಹಾಗೂ ಬೇಡಿಕೆಗಳ ಅನ್ವಯ ಸಸಿಗಳನ್ನು ವಿತರಿಸಲಾಗುವುದು.

ಈ ಮೇಲಿನಂತೆ ಕಾರ್ಯಕ್ರಮವನ್ನು 2023-24ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಇಲಾಖೆಯಿಂದ ಸರ್ಕಾರಿ ಸ್ವಾಮ್ಯದ ಶಾಲೆ ಕಾಲೇಜು/ಸಂಸ್ಥೆ ಹಾಗೂ ಸರ್ಕಾರಿ ಇಲಾಖೆಗಳಿಗೆ ತೆಂಗಿನ ಸಸಿಗಳನ್ನು ವಿತರಿಸುವುದು ಹಾಗೂ ರೈತರಿಗೆ 0.20 ಹೆಕ್ಟೇರ್‌ನಿಂದ 1.00 ಹೆಕ್ಟೇರ್ ಪ್ರದೇಶ ವಿಸ್ತರಣೆ ಕೈಗೊಳ್ಳಲು ಇಲಾಖೆಯಿಂದ ಅಗತ್ಯವಿರುವ ತೆಂಗಿನ ಸಸಿಗಳನ್ನು ಮೇಲ್ಕಂಡ ಕೋಷ್ಟಕದ ಪ್ರಕಾರ ನೀಡಲು ಒಟ್ಟು ರೂ.400.00 ಲಕ್ಷಗಳಿಗೆ CHD ಯೋಜನೆಯಡಿ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**7. ಫಲಾನುಭವಿಗಳ ಅರ್ಹತೆ:**

1) ಸರ್ಕಾರಿ ಸ್ವಾಮ್ಯದ ಶಾಲೆ ಕಾಲೇಜು/ಸಂಸ್ಥೆ ಹಾಗೂ ಸರ್ಕಾರಿ ಇಲಾಖೆಗಳಲ್ಲಿ ನೀರಾವರಿ ಸೌಲಭ್ಯ ಮತ್ತು ಕಾಂಪೌಂಡ್/ಬೇಲಿ ಇರಬೇಕು.
2) ಫಲಾನುಭವಿಗಳು ರೈತರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು, ನೀರಾವರಿ ಸೌಲಭ್ಯ ಹೊಂದಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಾಧಿಕಾರಿಯಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದನಂತರದಲ್ಲಿ ಅರ್ಹ ಫಲಾನುಭವಿಯ ಹೆಸರಿನಲ್ಲಿ ಅರ್ಜಿ ಪಡೆಯುವುದು.
3) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಯನ್ನು ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದು.
4) ಈ ಉಪ-ಯೋಜನೆಯಡಿ ಫಲಾನುಭವಿಯು ಯಾವುದೇ ಜಮೀನನ್ನು ಭೋಗ್ಯಕ್ಕೆ ಪಡೆದು ಅಥವಾ ಪರಭಾರೆ ಪಡೆದು ಅನುಷ್ಠಾನಗೊಳಿಸುವಂತಿಲ್ಲ. ಒಂದು ವೇಳೆ ಇಂತಹ ಜಮೀನುಗಳಲ್ಲಿ ಅನುಷ್ಠಾನಗೊಳಿಸಿದಲ್ಲಿ ಸಹಾಯಧನಕ್ಕೆ ಪರಿಗಣಿಸಬಾರದು.
5) ಫಲಾನುಭವಿ/ ರೈತರು ಸದರಿ ಉಪ- ಯೋಜನೆಯಡಿ ತೆಂಗು ಪ್ರದೇಶ ವಿಸ್ತರಣೆಗೆ ಸಹಾಯಧನ ಪಡೆದಲ್ಲಿ, ಇಲಾಖೆಯ ರಾಜ್ಯವಲಯ ಮತ್ತು CDB, MGNREGA ಹಾಗೂ ಇತರೆ ಕೇಂದ್ರವಲಯ ಯೋಜನೆಗಳಡಿಯಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
6) ಫಲಾನುಭವಿಯಿಂದ ಉಪ ಯೋಜನೆಯಡಿ ಅರ್ಜಿ ಸಲ್ಲಿಸಿದ ಚಟುವಟಿಕೆಗಾಗಿ ಇಲಾಖೆಯ ಇತರೆ ಯೋಜನೆಗಳಡಿ ಸಹಾಯಧನ ಪಡೆದಿರುವ / ಪಡೆದಿಲ್ಲ ಎಂಬುದರ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯುವುದು.

7) ಫಲಾನುಭವಿಯು ಅರ್ಜಿಯಲ್ಲಿ ಕೋರಿರುವ ತೆಂಗಿನ ಸಸಿಗಳನ್ನು ತಾಕು / ತೋಟದ ಪ್ರದೇಶಕ್ಕೆ ಅನುಗುಣವಾಗಿ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿದಂತೆ ತೆಂಗಿನ ಸಸಿ ವಿತರಿಸಲು ಕ್ರಮಕೈಗೊಳ್ಳುವುದು.

8) ಫಲಾನುಭವಿ ರೈತರು ಸದರಿ ಉಪ- ಯೋಜನೆಯಡಿ ಸಸಿಗಳನ್ನು ಪಡೆದು ಅಭಿವೃದ್ಧಿ ಪಡಿಸಿದ ತೋಟದ ಮುಂಭಾಗದಲ್ಲಿ ಫಲಾನುಭವಿ ಹೆಸರು, ವರ್ಗ, ಗ್ರಾಮ, ಸರ್ವೆ ನಂ., ಬೆಳೆಯ ಹೆಸರು, ಸಹಾಯಧನದ ಮೊತ್ತ ಮತ್ತು ವರ್ಷಗಳ ವಿವರಗಳನ್ನು ನಮೂದಿಸಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಅಭಿವೃದ್ಧಿ ಪಡಿಸಲಾಗಿದೆ ಎಂಬ ನಾಮಫಲಕವನ್ನು ಕಡ್ಡಾಯವಾಗಿ ಹಾಕುವುದು.

## 8. ಫಲಾನುಭವಿಗಳ ಆಯ್ಕೆ ಹಾಗೂ ಕಾರ್ಯಕ್ರಮ ಅನುಷ್ಠಾನದ ವಿಧಾನ:

1. ಜಿಲ್ಲೆಗೆ ನಿಗದಿಪಡಿಸಿದ ಸಾಮಾನ್ಯ ವರ್ಗದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
2. **ತೋಟಗಾರಿಕೆ ಇಲಾಖೆಯ ಕ್ಷೇತ್ರಗಳಿಂದಲೇ ಕಡ್ಡಾಯವಾಗಿ ತೆಂಗಿನ ಸಸಿಗಳನ್ನು ಖರೀದಿಸುವುದು. ಇಲಾಖೆಯನ್ನು ಹೊರತುಪಡಿಸಿ ಬೇರೆ ಕಡೆಯಿಂದ ಖರೀದಿಸುವಂತಿಲ್ಲ.**
3. ಪ್ರದೇಶ ವಿಸ್ತರಣೆ ಮಾಡಲಾದ ತಾಕುಗಳನ್ನು ವರ್ಷಕ್ಕೆ ಕನಿಷ್ಟ 2 ಬಾರಿ ಭೇಟಿ ನೀಡಿ ಪರಿಶೀಲಿಸಿ ದಾಖಲಾತಿ ನಿರ್ವಹಿಸುವುದು.
4. ಜನ ಪ್ರತಿನಿಧಿಗಳ ಸಮ್ಮುಖದಲ್ಲಿ ತೆಂಗು ಸಸಿಗಳ ವಿತರಣೆ ಕ್ರಮ ಕೈಗೊಳ್ಳುವುದು.

## 9. ತಾಕುಗಳ ಪರಿಶೀಲನೆ ವ್ಯವಸ್ಥೆ :

- ಸದರಿ ಉಪ- ಯೋಜನೆಯಡಿ ಅನುಷ್ಠಾನ ಮಾಡಿರುವ ತಾಕುಗಳ ಸಂಬಂಧಪಟ್ಟ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಕಡ್ಡಾಯವಾಗಿ ಶೇ.100 ರಷ್ಟು ಎಲ್ಲಾ ತಾಕು ಪರಿಶೀಲನೆ ಮಾಡತಕ್ಕದ್ದು.
- ಸಂಬಂಧಪಟ್ಟ ತಾಲ್ಲೂಕು ಹಿಸತೋನಿ ರವರು ಅಭಿವೃದ್ಧಿ ಪಡಿಸಿದ ತಾಕುಗಳ ಪೈಕಿ ಕನಿಷ್ಠ ಶೇ.50 ರಷ್ಟು ತಾಕುಗಳನ್ನು ಪರಿಶೀಲಿಸಬೇಕು.
- ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸದರಿ ರವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು.
- ಜಿಲ್ಲೆಯ ತೋಉನಿ (ಜಿಪಂ) ರವರು ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸಲಾದ ತಾಕುಗಳ ಪೈಕಿ ಶೇ.10 ರಷ್ಟು ತಾಕುಗಳ ಪರಿಶೀಲನೆ ಕಡ್ಡಾಯವಾಗಿ ಮಾಡುವುದು.
- ಹಿಸತೋನಿ ರವರು ಪರಿಶೀಲಿಸಿರುವ ತಾಕುಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸಂಬಂಧಪಟ್ಟ ತಾಲ್ಲೂಕು ಹಿಸತೋನಿ ಹಾಗೂ ಸತೋಅ (RSK) ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.

- ವಿಭಾಗೀಯ ಜಂಟಿ ನಿರ್ದೇಶಕರು ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲಾದ ಒಟ್ಟು ತಾಕುಗಳ ಪೈಕಿ ಶೇ.5 ರಷ್ಟು ತಾಕುಗಳನ್ನು ಜಿಲ್ಲಾವಾರು ಪರಿಶೀಲನೆ ಕಡ್ಡಾಯವಾಗಿ ಮಾಡುವುದು.
- ತೋಉನಿ (ಜಿಪಂ) ರವರು ಪರಿಶೀಲಿಸಿರುವ ತಾಕುಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸಂಬಂಧಪಟ್ಟ ತೋಉನಿ (ಜಿಪಂ), ಹಿಸತೋನಿ, ಸತೋಅ RSK ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವುದು.
- ನಿರ್ದೇಶನಾಲಯದ ಹಂತದಲ್ಲಿ ಸಂಬಂಧಪಟ್ಟ ಮೇಲುಸ್ತುವಾರಿ ಮತ್ತು ಜಿಲ್ಲಾ ಉಸ್ತುವಾರಿ ಅಪರ / ಜಂಟಿ ನಿರ್ದೇಶಕರು / ನಿರ್ದೇಶನಾಲಯದ ಉನ್ನತ ಅಧಿಕಾರಿಗಳು ಶೇ.1 ರಷ್ಟು ತಾಕುಗಳ ಪರಿಶೀಲಿಸುವುದು.
- ನಿರ್ದೇಶನಾಲಯದ ಹಂತದ ಅಧಿಕಾರಿಗಳ ಪರಿಶೀಲನೆಯ ಸಮಯದಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸಂಬಂಧಪಟ್ಟ ತೋಉನಿ (ಜಿಪಂ), ಹಿಸತೋನಿ, ಸತೋಅ RSK ರವರನ್ನು ಜವಾಬ್ದಾರರನ್ನಾಗಿ ಮಾಡಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.

## 10. ದಾಖಲೆಗಳನ್ನು ನಿರ್ವಹಿಸುವುದು:

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಪ್ರತಿ ತಿಂಗಳ 28ನೇ ತಾರೀಖಿನೊಳಗೆ ತಪ್ಪದೇ ಸಲ್ಲಿಸುವುದು.
2. ಫಲಾನುಭವಿಗಳ ತಾಕುಗಳ ಜಿಪಿಎಸ್ ಫೋಟೋಗಳನ್ನು ಹಾಗೂ ಸವಿವರವಾದ ಮಾಹಿತಿಯುಳ್ಳ ಯಶೋಗಾಥೆಗಳನ್ನು ತಯಾರಿಸಿ ನಿರ್ವಹಿಸುವುದು.
3. ಘಟಕವಾರು ಫಲಾನುಭವಿಗಳ ವಿವರಗಳನ್ನು ನಿರ್ವಹಿಸುವುದು.

## 11. ಫಲಶೃತಿ:

- ಅಧಿಕ ಇಳುವರಿ ನೀಡುವ ತೆಂಗಿನ ಗಿಡಗಳನ್ನು ರೈತರಿಗೆ ಒದಗಿಸುವುದರ ಮೂಲಕ ತೆಂಗು ಪ್ರದೇಶ ವಿಸ್ತರಿಸಿ ಆದಾಯವನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದು.
- ತೆಂಗು ಬೆಳೆ ಬೆಳೆಯುವ ಮೂಲಕ ತೆಂಗು ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನವನ್ನು ನೀಡಿ ರೈತರ ಆದಾಯ ಹೆಚ್ಚಿಸುವುದು.

ನಿರ್ದೇಶಕರು